## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 05-12-2020 ರಂದು ಸಮಯ 10.30 ಗಂಟೆಗೆ ವಾರ್ಡ್ ಸಂಖ್ಯೆ 155 ಹನುಮಂತನಗರ'ಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತ್ರಿಮೈಲಪ್ಪ ಉದ್ಯಾನವನ)ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.

1. ಶ್ರೀ ಚಂದ್ರಶೇಖರ.(ಕಂದಾಯ ಅಧಿಕಾರಿ ಮಹದೇವಪುರ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಗಿರೀಶ ವಿ. ಕುಡಾಳಕರ ಸಹಾಯಕ ಅಭಿಯಂತರರು ವಾ.ನಂ.-155 – ಸದಸ್ಯ ಕಾರ್ಯದರ್ಶಿ
3. ಶ್ರೀ. ನಟರಾಜ್ (ಹಿ.ಆ.ಪ.) – ಸದಸ್ಯರು
4. ಶ್ರೀ ಶ್ರೀನಿವಾಸ (ಕಂ.ಪ.)– ಸದಸ್ಯರು
5. ಕುಮಾರಿ. ನಂದಿನಿ ಕೆ.ಆರ್. (ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ.) – ಸದಸ್ಯರು
6. ಶ್ರೀ ಎನ್. ರಾಮಚಂದ್ರ–(ಕಿರಿಯ ಅಭಿಯಂತರರು ಬೆಸ್ಕಾಂ.) – ಸದಸ್ಯರು
7. ಶ್ರೀ. ಚಂದ್ರಶೇಕರ್ – ಸಾರ್ವಜನೀಕರು.
9. ಶ್ರೀ ಸುರೇಶ್– ಸಾರ್ವಜನೀಕರು.
10. ಶ್ರೀಮತಿ ಪ್ರೇಮಲತಾ– ಸಾರ್ವಜನೀಕರು.
11. ಶ್ರೀಮತಿ ಪದ್ಮಾ – ಸಾರ್ವಜನೀಕರು.
12. ಶ್ರೀ ಉದಯ. – ಸಾರ್ವಜನೀಕರು.
13. ಶ್ರೀ. ಪಿಳ್ಳಪ್ಪ – ಸಾರ್ವಜನೀಕರು

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರ ಮೇರೆಗೆ ನೆರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು ಮತ್ತು ಅಧಿಕಾರಿಗಳನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಬಿ.ಬಿ.ಎಂ.ಪಿ My city/My project 2021-2022 ಕಾರ್ಯಕ್ರಮನ್ನು ಅನುಷ್ಠಾನಗೊಳಿಸಲು ಮಾನ್ಯ ಆಯುಕ್ತರ ಆದೇಶದಂತೆ ಹೊಸದಾಗಿ ಸಾರ್ವಜನೀಕ ಶೌಚಾಲಯ ಹಾಗೂ ಹೊಸದಾಗಿ ಪಾದಚಾರಿ ಮಾರ್ಗ ನಿರ್ಮಿಸಲು/ದುರಸ್ಥಿ ಗೊಳಿಸು ಸ್ಥಳವನ್ನು ಗುರುತಿಸುವ ಕುರಿತು ಸುವಿಸ್ತಾರವಾಗಿ ಚರ್ಚಿಸಲಾಯಿತು. ಅದಕ್ಕೆ ಸಭೆಯಲ್ಲಿ ಉಪಸ್ಥಿತರಿರುವ ಸಾರ್ವಜನೀಕರು ಹಾಗೂ ಸದಸ್ಯರು ಸದರಿ ಸಾರ್ವಜನೀಕ ಶೌಚಾಲಯವನ್ನು ನಿರ್ಮಿಸಲು ಸ್ಥಳಕ್ಕಾಗಿ 4 ದಿನಗಳ ಕಾಲವಕಾಶ ಕೋರಿದರು.

**ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳು.**

ಹನುಮಂತನಗರ ಕೆಂಪೇಗೌಡ ಈಜುಕೊಳದ ಪಕ್ಕದ ರಸ್ತೆಯಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಒಳಚರಂಡಿ ಲೈನ್‌ಗಾಗಿ ಅಗೆದಿದ್ದು ಇದನ್ನು ಸರಿಪಡಿಸಲು/ತುಂಬಲು ಸಭೆಯಲ್ಲಿ ಹಾಜರಿದ್ದ ಶ್ರೀ. ಚಂದ್ರುರವರು ಕೋರಿದರು.

ಹನುಮಂತನಗರ ಕೆಂಪೇಗೌಡ ಈಜುಕೊಳದ ಪಕ್ಕದ ಪೂರ್ತಿ ರಸ್ತೆಯನ್ನು ಡಾಂಬರೀಕರಣ ಮಾಡಲು ರೋಡ್ ಇನ್ಫ್ರಾ ಬಿ.ಬಿ.ಎಂ.ಪಿ. ರವರ ವತಿಯಿಂದ ಕೈಗೆತ್ತಿಕೊಳ್ಳಲು ಯೋಜಿಸಿದ್ದು ಸಧ್ಯದಲ್ಲೇ ಡಾಂಬರೀಕರಣ ಮಾಡಲು ಕ್ರಮ ಕೈಗೆತ್ತಿಕೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ಮೇಜರ್ ರೋಡ್ಸ್ ರವರು ತಿಳಿಸಿಯವುದಾಗಿ ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

Scanned with CamScanner

ಹನುಮಂತನಗರ ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನದ ಹತ್ತಿರವಿರುವ ಪಾದಚಾರಿ ಮಾರ್ಗವನ್ನು ಸರಿಪಡಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ. ಚಂದ್ರುರವರು ಕೋರಿದರು.

ಹನುಮಂತನಗರ ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನದ ಹತ್ತಿರವಿರುವ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸುವ ಮತ್ತು ಸುಧಾರಣೆಗೊಳಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಅಂದಾಜುಪಟ್ಟಿ ತಯಾರಿಸುತ್ತಿದ್ದು ಸದರಿ ಕಾಮಗಾರಿಯನ್ನು ಆದಷ್ಟು ಬೇಗ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಹನುಮಂತನಗರ ಹರಿಹರಗುಡ್ಡ (ತಿಮ್ಮೇಶ್ ಪ್ರಭು)ಉದ್ಯಾನವನದಲ್ಲಿ ವಾಚ್ ಮೆನ್ ಇರುವುದಿಲ್ಲ ಆದುದರಿಂದ ವಾಚ್ ಮೆನ್ ನನ್ನು ನಿಯೋಜಿಸಲು ಕ್ರಮ ಕೈಗೊಳ್ಳಲು ಹಾಜರಿದ್ದ ಶ್ರೀ. ಚಂದ್ರಶೇಕರ್‌ರವರು ಕೋರಿದರು.

ಸದರಿ ವಿಷಯದ ಕುರಿತು ತೋಟಗಾರಿಕೆ ಇಲಾಖೆ ಬಿ.ಬಿ.ಎಂ.ಪಿ. ರವರಿಗೆ ತಿಳಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಹನುಮಂತನಗರ ಎ.ಕಾಲೋನಿ. ಉದ್ಯಾನವನದಿಂದ ಮಳೆ ನೀರು,ಚರಮಡಿ ನೀರು ರಸ್ತೆಯಲ್ಲಿ ಹರಿದುಹೋಗುವುದನ್ನು ಸರಿಪಡಿಸಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ. ಪಿಳ್ಳಪ್ಪರವರು ಕೋರಿದರು.

ಹನುಮಂತನಗರ ಎ.ಕಾಲೋನಿ. ಉದ್ಯಾನವನದಿಂದ ಮಳೆ ನೀರು,ಚರಮಡಿ ನೀರು ರಸ್ತೆಯಲ್ಲಿ ಹರಿದುಹೋಗುವುದನ್ನು ಹೊಸದಾಗಿ ಮೋರಿಯನ್ನು ನಿರ್ಮಿಸಿ ಬೇರೆ ಕಡೆ ಸಾಗಿಸುವ ಕಾಮಗಾರಿಯನ್ನು ತೆಗೆದುಕೊಂಡಿದ್ದು ಟೆಂಡರ್ ಹಂತದಲ್ಲಿರುತ್ತದೆ ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**ಅರಣ್ಯ ಇಲಾಖೆ.**

ಮಾರುತಿ ವೃತ್ತದಬಳಿ ಬೆಡ್ ಅಂಗಡಿಯ ಬಳಿ ಮರದ ರೆಂಬೆಯನ್ನು ಕತ್ತರಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ. ಚಂದ್ರುರವರು ಕೋರಿದರು.

ಸದರೀ ವಿಷಯದ ಕುರಿತು ಅರಣ್ಯ ಇಲಾಖೆ ಅಧಿಕಾರಿಯವರಿಗೆ ಸೂಚಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**COVID-19 ಕಾಯಿಲೆ ಕುರಿತು**

COVID-19 ಕಾಯಿಲೆ ಕುರಿತು ಸಾರ್ವಜನೀಕರ ಹಿತದೃಷ್ಟಿಯಿಂದ ವಾರ್ಡ್‌ನ ನಾಗರೀಕರಿಗೆ ಉಚಿತ Mobile Team ರಚಿಸಿದ್ದು ಸದರಿ ಟೀಂನ್ನು ವಾರ್ಡಲ್ಲಿ Camp ಮಾಡಿ ಧ್ವನಿವರ್ಧಕ ಹಾಗೂ ಬೆನರ್ಸ್ ಮೂಲಕ ತಪಾಸಣೆ ಮಾಡಿಸಿಕೊಳ್ಳಲು ಅರಿವು ಮೂಡಿಸಲು ಕ್ರಮಕೈಗೊಳ್ಳಲು ಹಾಗೂ ಕಟ್ಟಡ ಕಾಮಗಾರಿ ನಡೆಯುತ್ತಿದ್ದಲ್ಲಿ/ಕಮರ್‌ಶಿಯಲ್ ಭಾಗಗಳಲ್ಲಿ ತಪಾಸಣೆ ಕೈಗೊಳ್ಳಲು ಕ್ರಮವಹಿಸಲು ಸೆಕ್ಟರ್ ಅಧಿಕಾಯವರಿಗೆ ಸೂಚಿಸಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.

**ಆರೋಗ್ಯ ಇಲಾಖೆ**

ವಾರ್ಡ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟನ್ನು ಕಡಿಮೆ ಗೊಳಿಸಲು ಹಾಗೂ ಕಸವನ್ನು ಸರಿಯಾಗಿ ವಿಲೇವಾರಿಮಾಡಲು ಕ್ರಮಕೈಗೊಳ್ಳಲು ಸಭೆಯಲ್ಲಿ ಉಪಸ್ಥಿತರಿರುವ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಭೆಯಲ್ಲಿ ಸೂಚಿಸಲಾಯಿತು.

ಹನುಮಂತನಗರ ವಾರ್ಡ ವ್ಯಾಪ್ತಿಯಲ್ಲಿ ಪ್ರತಿ ಬ್ಲಾಕ್ ನಲ್ಲಿ ಯಾವಯಾವ ವಾಹನವನ್ನು ಸೋಲಿಡ್ ವೆಸ್ಟ ಸಂಗ್ರಹಿಸಲು ನಿಯೋಜಿಸಲಾಗಿರುವ ಕುರಿತು ಹಾಗೂ ಯಾವ ಯಾವ ಸಮಯದಲ್ಲಿ ಹಸಿ ಕಸ, ಒಣ ಕಸ ಮತ್ತು ಸೆನಿಟರಿ ಕಸವನ್ನು ಸಂಗ್ರಹಿಸುತ್ತಾರೆ ಎಂಬುವುದನ್ನು ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ನಟರಾಜ್‌ರವರು ವಿವರವಾಗಿ ಸಭೆಯಲ್ಲಿ ತಿಳಿಸಿದರು.

Scanned with CamScanner

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನೀಕರಿಗೆ ಪ್ರತೀ ತಿಂಗಳ ಮೊದಲನೇಯ ಮತ್ತು ಮೂರನೇ ಶನಿವಾರದಂದು ವಾರ್ಡ ಕಮೀಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತ ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

05.12.2020

5/12/2020

| | |
|---|---|
| ಕಾರ್ಯದರ್ಶಿ | ಅಧ್ಯಕ್ಷರು ವಾರ್ಡ್ ಸಮಿತಿ |
| ಸಹಾಯಕ ಅಭಿಯಂತರರು | ಹಾಗೂ ನೋಡಲ್ ಅಧಿಕಾರಿಗಳು |
| ವಾರ್ಡ ಸಂಖ್ಯೆ-155 ಹನುಮಂತನಗರ | ವಾರ್ಡ ಸಂಖ್ಯೆ-155 ಹನುಮಂತನಗರ |

ಪ್ರತಿಯನ್ನು

1. ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮಾಹಿತಿಗಾಗಿ.
2. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
4. ಉಪ ಆಯುಕ್ತರು(ದ) ರವರಿಗೆ ಮಾಹಿತಿಗಾಗಿ.
5. ಅಧೀಕ್ಷಕ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
6. ಕಾರ್ಯಪಾಲಕ ಅಭಿಯಂತರರು ರವರಿಗೆ ಮಾಹಿತಿಗಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ.
8. ಕಛೇರಿ ಕಡತಕ್ಕೆ .

Scanned with CamScanner